KAGD400000502025

# <u>ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ರೋಣ</u>

**ಉಪಸ್ಥಿತಃ ಶ್ರೀ.ಮಹದೇವಪ್ಪ.ಎಚ್. ಬಿ.ಎ., ಎಲ್.ಎಲ್.ಬಿ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರೋಣ**

**ದಿನಾಂಕ 15 ನೇ ಜೂನ್ ಮಾಹೆ 2026**

**<u>ಅಸಲು ದಾವಾ ಸಂಖ್ಯೆಃ 18/2025</u>**

**<u>ವಾದಿಃ</u>** ಶಿವಪ್ಪ ತಂದೆ ವೀರಭದ್ರಪ್ಪ ಮಾರನಾಳ,
ವಯಾಃ 39 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ತಿಮ್ಮಾಪೂರ, ತಾ/ ಜಿಃ ಗದಗ.

**(ವಾದಿಯರ ಪರ, ಶ್ರೀ ಆರ್.ಬಿ.ಎಂ., ವಕೀಲರು)**

<u>:: ವಿರುದ್ಧ ::</u>

**<u>ಪ್ರತಿವಾದಿಃ</u>** ಸುರೇಶ ತಂದೆ ಪರಸಪ್ಪ ಮಾರನಾಳ,
ವಯಾಃ 36 ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಹಿರೇಕೊಪ್ಪ, ತಾಃ ಗಜೇಂದ್ರಗಡ, ಜಿಃ ಗದಗ.

**( ಏಕಪಕ್ಷೀಯರಾಗಿರುತ್ತಾರೆ)**

| | |
|---|---|
| ದಾವೆ ಸಲ್ಲಿಸಿದ ದಿನಾಂಕಃ | **21/01/2025** |
| ದಾವೆಯ ಸ್ವರೂಪಃ | ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ |
| ಅಧಿವಿಚಾರಣೆ ಆರಂಭವಾದ ದಿನಾಂಕಃ | **01/12/2025** |
| ಅಧಿವಿಚಾರಣೆ ಮುಕ್ತಾಯವಾದ ದಿನಾಂಕಃ | **03/06/2026** |
| ತೀರ್ಪು ಹೊರಡಿಸಿದ ದಿನಾಂಕಃ | **15/06/2026** |
| ದಾವಾ ಪ್ರಕ್ರಿಯೆಯ ಒಟ್ಟು ಅವಧಿಃ | ವರ್ಷ ತಿಂಗಳು ದಿನಗಳು<br>**01 04 25** |

**::ತೀರ್ಪು::**

ವಾದಿಯು ಈ ದಾವೆಯನ್ನು ಪ್ರತಿವಾದಿಯ ವಿರುದ್ದ ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುತ್ತಾರೆ.

**ದಾವೆಯ ವಾಸ್ತವಾಂಶ ಈ ಕೆಳಗಿನಂತಿರುತ್ತದೆ**

2. ದಾವಾ ಆಸ್ತಿಯು ವಾದಿ ಹಾಗೂ ಪ್ರತಿವಾದಿಯ ಜಂಟೀ ಮಾಲೀಕತ್ವದ ಆಸ್ತಿಯಾಗಿದ್ದು, ಈ ದಾವಾ ಆಸ್ತಿಯ ರಿ.ಸ.ನಂ-56 ವಿಸ್ತೀರ್ಣ 3 ಎಕರೆ 4 ಗುಂಟೆ ಜಮೀನು ದಾವಾ ಆಸ್ತಿಯಾಗಿದ್ದು, ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ-403/2023 ದಾವೆಯನ್ನು ಮಾಡಿ, ಅ ದಾವೆಯಲ್ಲಿ ರಾಜೀ ಡಿಕ್ರಿ ಮಾಡಿಕೊಂಡಿದ್ದು, ಆ ರಾಜೀ ಡಿಕ್ರಿಯ ಪ್ರಕಾರ ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಯವರಿಗೆ ಜಂಟೀ ಹಿಸ್ಸೆಗೆ ಬಂದಿದ್ದು ಇರುತ್ತದೆ. ವಾದಿಯು ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ತನ್ನ ½ ಹಿಸ್ಸೆವನ್ನು ಗಡಿ ರೇಖೆಗಳೊಂದಿಗೆ ಭಾಗ ಮಾಡಿ ಕೊಡುವಂತೆ ಕೇಳಿಕೊಂಡಾಗ ಪ್ರತಿವಾದಿಯು ಇಂದು ನಾಳೆ ಅಂತಾ ದಿನಮೇಕ ಮಾಡುತ್ತಾ ಬಂದಿರುತ್ತಾನೆ. ವಾದಿಯ ಸ್ವತಃ ಹಾಗೂ ಹಿರಿಯರ ಮುಖಾಂತರ ಹೇಳಿಸಿದ್ದರೂ ಸಹ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಯಾವುದೇ ಭಾಗಾಂಶ ಮಾಡಿ ಕೊಡದೆ ಇದ್ದುದರಿಂದ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ. ಆದ್ದರಿಂದ ದಾವೆಯಲ್ಲಿ ಕೋರಿಕೊಂಡಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ವಾದಿಯು ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಗೆ ಸಮನ್ಸ್ ನೀಡಲಾಗಿ, ಸಮನ್ಸ್ ಜಾರಿಯಾದರು ಸಹ ಪ್ರತಿವಾದಿ ಹಾಜರಾಗದೆ ಇದ್ದುದರಿಂದ ಸದರಿಯವರನ್ನು ಏಕಪಕ್ಷೀಯರನ್ನಾಗಿ ಮಾಡಲಾಗಿರುತ್ತದೆ.

4. ಈ ಮೇಲಿನ ವಾಸ್ತವಾಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವಾಗಿರುತ್ತವೆ:-

**<u>::ಅಂಶಗಳು::</u>**

1. ವಾದಿಯು ನ್ಯಾಯಾಲಯದ ಮುಂದೆ ದಾವಾ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿ ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ ಎಂದು ರುಜುವಾತುಪಡಿಸಿರುತ್ತಾರೆ ?
2. ವಾದಿಯು ನ್ಯಾಯಾಲಯದ ಮುಂದೆ ಅಸಲು ದಾವಾ ಸಂಖ್ಯೆ-403/2023 ರಲ್ಲಿ ರಾಜೀ ಆಗಿರುತ್ತಾರೆ ಎಂದು ರುಜುವಾತುಪಡಿಸಿರುತ್ತಾರೆ ?
3. ವಾದಿಯು ದಾವೆಯಲ್ಲಿ ಕೋರಿಕೊಂಡ ಪರಿಹಾರ ಪಡೆದುಕೊಳ್ಳಲು ಅರ್ಹರಿರುತ್ತಾರೆ ?
4. ಏನು ಆದೇಶ ?

5. ಈ ಮೇಲಿನ ಅಂಶಗಳನ್ನು ರುಜುವಾತುಪಡಿಸಲು, 1 ನೇ ವಾದಿಯು ಸ್ವತಃ ಪಿಡಬ್ಲ್ಯೂ.1 ಎಂದು ವಿಚಾರಣೆಗೆ ಒಳಗಾಗುವ ಮುಖಾಂತರ ನ್ಯಾಯಾಲಯ ಮುಂದೆ ನಿಪಿ-1 ಮತ್ತು 2 ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಪ್ರತಿವಾದಿಗಳು ಏಕಪಕ್ಷೀಯರಾಗಿರುತ್ತಾರೆ.

6. ವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

7. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ :-

| | | |
|---|---|---|
| ಅಂಶ 1 | - | ಸಕಾರಾತ್ಮಕವಾಗಿ |
| ಅಂಶ 2 | - | ಸಕರಾತ್ಮಕವಾಗಿ |
| ಅಂಶ 3 | - | ಸಕರಾತ್ಮಕವಾಗಿ |
| ಅಂಶ 4 | - | ಮಾಡಲಾದ ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

**::ಕಾರಣಗಳು ::**

8. **ಅಂಶ 1 ರಿಂದ 3**:- ಈ ಅಂಶಗಳು ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ವಾದಿಯ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಯಲ್ಲಿ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಿರುತ್ತಾರೆ.

9. ವಾದಿಯ ದಾವೆ ಏನೆಂದರೆ ದಾವಾ ಆಸ್ತಿಯು ವಾದಿ ಹಾಗೂ ಪ್ರತಿವಾದಿಯ ಜಂಟೀ ಮಾಲೀಕತ್ವದ ಆಸ್ತಿಯಾಗಿದ್ದು, ಈ ದಾವಾ ಆಸ್ತಿಯ ರಿ.ಸ.ನಂ-56 ರ ಆಸ್ತಿಯಾಗಿದ್ದು, ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ-403/2023 ದಾವೆಯನ್ನು ರಾಜೀ ಡಿಕ್ರಿ ಮಾಡಿಯಾಗಿದ್ದು, ಆ ಪ್ರಕಾರ ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿಗೆ ಜಂಟೀ ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಯು ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ತನ್ನ ½ ಹಿಸ್ಸೆದ ಗಡಿ ರೇಖೆಗಳೊಂದಿಗೆ ಭಾಗ ಮಾಡಿ ಕೊಡುವಂತೆ ಕೇಳಿಕೊಂಡಾಗ

ಪ್ರತಿವಾದಿಯು ಇಂದು ನಾಳೆ ಅಂತಾ ನಿರಾಕರಿಸಿದ್ದು, ವಾದಿಯು ಹಿರಿಯರ ಮುಖಾಂತರ ಹೇಳಿಸಿದರೂ ಸಹ ಭಾಗ ಮಾಡಿಕೊಂಡದೆ ನಿರಾಕರಿಸಿದ್ದರಿಂದ ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ ಎಂಬುದಾಗಿರುತ್ತದೆ.

10. ಸದರಿ ಸಂಗತಿಗಳನ್ನು ರುಜುವಾತುಪಡಿಸುವ ಸಲುವಾಗಿ ವಾದಿಯು ಸ್ವತಃ ಪಿ.ಡಬ್ಲ್ಯೂ-1 ಎಂದು ವಿಚಾರಣೆ ಒಳಗಾಗಿ ನ್ಯಾಯಾಲಯದ ಮುಂದೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ವಾದಪತ್ರದ ಸಂಗತಿಗಳನ್ನು ಪುನರುಚ್ಚಿರಿಸಿರುತ್ತಾರೆ.

11. ವಾದಿಯು ಹಾಜರುಪಡಿಸಿರುವ ನಿಪಿ-1 ದಾಖಲೆಯು ದಾವಾ ಆಸ್ತಿಯ ಪಹಣಿ ಪತ್ರಿಕೆಯಾಗಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಾವಾ ಆಸ್ತಿಗೆ ಸಂಬಂಧಪಟ್ಟಿದ್ದು, ಈ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಯು ಹೆಸರಿಗೆ ಅದು ಎಂ.ಆರ್.ಎಚ್ 17/2023-24 ನ್ನು ಆಧರಿಸಿ ಜಂಟಿ ಖಾತೆಯಾಗಿರುತ್ತದೆಂದು ಕಂಡು ಬಂದಿರುತ್ತದೆ. ನಿಪಿ-2 ದಾಖಲೆಯು ರಾಜೀ ಡಿಕ್ರಿ ಇದ್ದು, ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ-430/2023 ರಲ್ಲಿ ರಾಜೀಯಾಗಿದ್ದು, ಆ ಪ್ರಕಾರ ಜಂಟೀ ಖಾತೆಯಾಗಿರುತ್ತದೆ ಕಂಡು ಬಂದಿರುತ್ತದೆ. ಈ ದಾವೆಯಲ್ಲಿ ಪ್ರತಿವಾದಿ ಹಾಜರಾಗಿ ಯಾವುದೇ ಲಿಖಿತ ತಕರಾರನ್ನು ಸಲ್ಲಿಸಿರುವುದಿಲ್ಲ ಮತ್ತು ವಾದಿಗೆ ಯಾವುದೇ ಪಾಟೀ ಸವಾಲನ್ನು ಸಹ ಮಾಡಿರುವುದಿಲ್ಲ ಮತ್ತು ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ.

12. ಈ ಮೇಲಿನ ವಾದಿಯ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯವನ್ನು ಪರಿಶೀಲಿಸಲಾಗಿ ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿ ಸಾಮೂಹಿಕ ಮಾಲೀಕತ್ವದಲ್ಲಿ ಇದ್ದು, ವಾದಿಯ ಹಾಜರುಪಡಿಸಿರುವ ನಿಪಿ-1 ಮತ್ತು 2 ದಾಖಲೆಗಳನ್ನು ಪರಿಶೀಲಿಸಲಾಗಿ ದಾವಾ ಆಸ್ತಿಯು ವಾದಿ ಮತ್ತು ಪ್ರತಿವಾದಿ ಅಸಲು ದಾವಾ ಸಂಖ್ಯೆ-430/2023 ರಂತೆ ರಾಜೀ ಮಾಡಿಕೊಂಡಿದ್ದು, ಆ ಪ್ರಕಾರ ಎಂ.ಆರ್.ಎಚ್ 17/2023-24 ರಂತೆ ಜಂಟೀ ಖಾತೆಯಾಗಿ ಮಾಡಿಕೊಂಡಿರುತ್ತಾರೆ. ವಾದಿಯು ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ 1/2 ಭಾಗಾಂಶ ಮತ್ತು ಗಡಿ ರೇಖೆಗಳನ್ನು ಗುರುತಿಸಬೇಕೆಂದು ಕೋರಿಕೊಂಡಾಗ ಪ್ರತಿವಾದಿ ತೀರಸ್ಕರಿಸಿದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಕಂಡು ಬಂದಿರುತ್ತದೆ ಮತ್ತು ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗದೇ, ಲಿಖಿತ ತಕರಾರು ಸಲ್ಲಿಸದೆ ಇರುವ ಸಂಗತಿಗಳಿಂದಲೂ ಸಹ ಕಂಡು ಬಂದಿರುತ್ತದೆ. ವಾದಿಯ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯ ಮುಖಾಂತರ ದಾವಾ ಆಸ್ತಿಯಲ್ಲಿ ಸಾಮೂಹಿಕ ಮಾಲೀಕತ್ವದ ಆಸ್ತಿಯಾಗಿದ್ದು, ವಾದಿ ಮತ್ತು ಪ್ರತಿವಾದಿ ಜಂಟೀ ಸ್ವಾಧೀನತೆಯಲ್ಲಿರುತ್ತಾರೆಂದು ರುಜುವಾತುಪಡಿಸಿದ್ದರಿಂದ ವಾದಿಯ ದಾವೆಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ. ಆದ್ದರಿಂದ **ಅಂಶ 1 ಮತ್ತು 2 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

13. **ಅಂಶ 3:-** ಈ ಮೇಲಿನ ಅಂಶ 1 ರಿಂದ 3 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ:-

## ::ಆದೇಶ::

- ವಾದಿಯ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿದೆ.
- ವಾದಿಯು ದಾವಾ ಆಸ್ತಿಗಳಲ್ಲಿ ಬರುವ 1/2 ಭಾಗಾಂಶವನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿ ದಾವಾ ಆಸ್ತಿಗಳಲ್ಲಿ 1/2 ಭಾಗಾಂಶವನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.
- ಪ್ರತಿವಾದಿ ತಮ್ಮ ಪಾಲಿನ ಹಿಸ್ಸೆಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿಸತಕ್ಕದ್ದೆಂದು ನಿರ್ದೇಶಿಸಲಾಗಿದೆ.
- ಅಪೀಲಿನ ಅವಧಿಯು ಮುಗಿದ ನಂತರ ಕಛೇರಿಯು ಸ್ವತಃ ಎಫ್.ಡಿ.ಪಿ ಅರ್ಜಿಯನ್ನು ದಾಖಲಿಸತಕ್ಕದ್ದೆಂದು ನಿರ್ದೇಶಿಸಲಾಗಿದೆ.
- ಕಛೇರಿಯು ಆ ಪ್ರಕಾರವಾಗಿ ಪ್ರಾಥಮಿಕ ಡಿಕ್ರಿ ಬರೆಯತಕ್ಕದ್ದೆಂದು ನಿರ್ದೇಶಿಸಲಾಗಿದೆ.

**(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿಸಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 15/06/2026 ರಂದು ಘೋಷಿಸಲಾಯಿತು.)**

MAHADEVAPPA H
Digitally signed by MAHADEVAPPA H
Date: 2026.06.16 17:16:39 +0530

**(ಮಹದೇವಪ್ಪ.ಹೆಚ್.)**
**ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ**

## ::ಅನುಬಂಧಗಳು::

**I ವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

ಪಿ.ಡಬ್ಲ್ಯೂ.1: ಶಿವಪ್ಪ ತಂದೆ ವೀರಭದ್ರಪ್ಪ ಮಾರನಾಳ

II **ವಾದಿಯ/ರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ**

ನಿಪಿ.1 : ಪಹಣಿ ಪತ್ರಿಕೆಗಳು

ನಿಪಿ.2 : ಅಸಲು ದಾವಾ ಸಂಖ್ಯೆ-430/2023 ರ ರಾಜೀ ಡಿಕ್ರಿ ದೃಢೀಕೃತ ನಕಲು ಪ್ರತಿ

III **ಪ್ರತಿವಾದಿಯ/ರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

--

IV **ಪ್ರತಿವಾದಿಯರ ಪರವಾಗಿ ಗುರುತಿಸಲ್ಪಟ್ಟಿರುವ ದಾಖಲೆಗಳುಃ**

- -

MAHADEVAPPA H

Digitally signed by MAHADEVAPPA H
Date: 2026.06.16 17:16:48 +0530

**ಹಿರಿಯ ದಿವಾಣಿ ನ್ಯಾಯಾಧೀಶರು,**
**ರೋಣ**